ಎಲ್ಲ ಕಾಲಗಳಲ್ಲೂ ಚಲಿಸಬಹುದಾದ ದಾರಿಗಳ ಕುರಿತು ಯೋಚಿಸುತ್ತಿದ್ದರು. ಹೊಸ ಪೀಳಿಗೆ ಇದನ್ನು ಹೊಸ ಎತ್ತರಕ್ಕೊಯ್ಯುವ ಕುರಿತು ಆಳದಲ್ಲಿ ಕನಸುಗಳನ್ನಿಟ್ಟುಕೊಂಡಿದ್ದರು. ಯಾವುದನ್ನೇ ಆಗಲಿ ಸಾರ್ತ್ರ್ ನಿಧಾನಕ್ಕೆ ಯೋಚಿಸಿ ತಮ್ಮ ಹರಳುಗಟ್ಟಿದ ವಿಚಾರಗಳೊಂದಿಗೆ ಸ್ಪಂದಿಸುತ್ತಿದ್ದರು. ಆದರೆ, ವಿಕ್ಟರ್ ಇದಕ್ಕೆ ವಿರುದ್ಧವಾಗಿದ್ದ. ಅವಸರವಾದಿಯೂ ಪ್ರಚಾರಪ್ರಿಯನೂ ಆಗಿದ್ದ. ತನ್ನ ಶಾಬ್ದಿಕ ಹಲ್ಲೆಯಿಂದ ಸಾರ್ತ್ರ್‌ರ ನೈಜ ವಿಚಾರಗಳಿಗೆ ಮುಸುಕು ಹಾಕಿದ್ದ. ತನ್ನ ವಿತಂಡವಾದಗಳಿಂದ, ಶಾಬ್ದಿಕ ಆಕ್ರಮಣದಿಂದ ಯೋಚಿಸಲೂ ಅವಕಾಶ ಕೊಡದೆ ಬೇಗ ಬೇಗ ಉತ್ತರ ಪಡೆದು, ಅವರ ಮಾತನ್ನು ಅರ್ಧದಲ್ಲೆ ತುಂಡರಿಸಿ ತನಗೆ ಬೇಕಾದದ್ದನ್ನು ಮಾತ್ರ ಉಳಿಸಿಕೊಂಡು ಪ್ರಕಟಿಸಿದ್ದ. ಹೇಳಿದೆನಲ್ಲ, ಸಾರ್ತ್ರ್ ನಿಧಾನವಾಗಿ ಯೋಚಿಸುತ್ತಿದ್ದರು. ವಯಸ್ಸಿನ ಕಾರಣವೊ ಏನೊ, ಅವರು ಮಾತಾಡುವಾಗ ಯಾರಾದರೂ ನಡುವೆ ಬಾಯಿ ಹಾಕಿದರೆ ವಿಚಾರ ತುಂಡರಿಸಿ ಹೋಗುತ್ತಿತ್ತು. ತಾನು ಎಲ್ಲಿಂದ ಶುರುಮಾಡಿದ್ದೆ, ಎಲ್ಲಿಗೆ ಬಂದು ನಿಂತಿರುವೆ ಎಂದವರಿಗೆ ಗೊಂದಲವಾಗುತ್ತಿತ್ತು. ಇದರ ಲಾಭವನ್ನು ವಿಕ್ಟರ್ ಪಡೆದಿದ್ದ.

ಸಾರ್ತ್ರ್‌ರ ಬರವಣಿಗೆ ಕೂಡ ನಿಧಾನವಾಗಿರುತ್ತಿತ್ತು. ಹಾಗೆ ಬರೆದಿದ್ದನ್ನು ನಾವಿಬ್ಬರೂ ಓದಿ ಚರ್ಚಿಸುತ್ತಿದ್ದೆವು. ಎಲ್ಲಾ ಮಗ್ಗಲುಗಳ ಚರ್ಚೆ ಮುಗಿದ ಮೇಲೆಯೇ ಪ್ರಕಟಣೆಗೆ ಹೋಗುತ್ತಿತ್ತು. ಇತ್ತೀಚೆಗೆ ದೃಷ್ಟಿಹೀನತೆಯಿಂದಾಗಿ ಸಾರ್ತ್ರ್‌ಗೆ ಓದುವುದು ಕಷ್ಟವಾಗಿತ್ತು. ತಾವು ಬರೆದಿದ್ದನ್ನು ಹಲವು ಸಲ ಓದಿ ತಿದ್ದುತಿದ್ದ ವ್ಯಕ್ತಿಗೆ ಈಗ ಬರೆಯುವುದು ಮತ್ತು ಓದುವುದು ಎರಡೂ ಕೈಕೊಡುತ್ತಿತ್ತು. ಹೇಳಿ ಬರೆಸುತ್ತಿದ್ದರು ಮತ್ತು ಕೇಳಿಸಿಕೊಂಡು ತಿದ್ದುತಿದ್ದರು. ಇದು ಅವರ ಸ್ವಭಾವಕ್ಕೆ ಒಗ್ಗದ ಸಂಗತಿ. ಆದರೆ, ಅನಿವಾರ್ಯವಾದ ಸಂಗತಿ. ಒಮ್ಮೆ ಅವರೇ ವಿಷಾದದಿಂದ ನುಡಿದಿದ್ದರು, 'ನಾವು ಯೋಚಿಸಿದ್ದು ಯಾರೋ ಬರೆದು ಓದಿದರೆ ಅದರ ಪರಿಣಾಮವೇ ಮಸುಕಾಗಿ ಬಿಡುತ್ತದೆ'.

ಮರುದಿನ ಬೆಳಗ್ಗೆ ನಾನವರನ್ನು ಎಚ್ಚರಿಸಲು ಕೋಣೆಗೆ ಹೋದೆ. ಅವರಿನ್ನೂ ಹಾಸಿಗೆಯಲ್ಲಿದ್ದರು. ಏನೇನೊ ಬಡಬಡಿಸುತ್ತಿದ್ದರು. ಸ್ಪಷ್ಟವಾಗಿ ಕೇಳಿಸಲಿಲ್ಲ. ಆರಲೆಟ್ಟೆ ಹೇಳಿದ ಪ್ರಕಾರ ಅವರಿಗೆ ಏರೋಫೇಜಿಯಾ ರೋಗ ಕಾಣಿಸಿಕೊಂಡಿದೆಯಂತೆ. ಇದರಿಂದ ಒಳಗೆ ಗಾಳಿಯ ಒತ್ತಡಕ್ಕೆ ಕಷ್ಟಪಡುತ್ತಿದ್ದರು. ಆದರೆ, ಬೇಗ ಗುಣಮುಖರಾದರು. ಈ ಹೊಸ ಸ್ಥಿತಿಯಿಂದ ನನಗೆ ಗಾಬರಿಯಾಯಿತು. ತುಂಬಾ ನಿಶ್ಶಕ್ತರಾಗಿದ್ದರು. ಒಮ್ಮೆ ಅವರ ನಿಶ್ಶಕ್ತಿ ಹೆಚ್ಚಾಗಿ ಅಸ್ವಸ್ಥರಾದರು. ನಾನು ಫೋನ್ ಮಾಡಿದರೆ ಅದು ಚಾಲನೆಯಲ್ಲಿರಲಿಲ್ಲ. ಫೋನ್ ಬಿಲ್ಲು ಕಟ್ಟುವುದೇ ಮರೆತುಹೋಗಿತ್ತು. ನಾನು ಓಡುತ್ತ ಹೋಗಿ ಸೆಕ್ಯುರಿಟಿ ಗಾರ್ಡಿನ ಬಳಿಯಿರುವ ಫೋನಿನಿಂದ ಹತ್ತಿರದ ವೈದ್ಯರೊಬ್ಬರಿಗೆ ಕರೆ ಮಾಡಿದೆ. ಅವರು ತಕ್ಷಣಕ್ಕೆ ಬಂದರು. ಸಾರ್ತ್ರ್‌ರನ್ನು ಪರೀಕ್ಷಿಸಿ ತಕ್ಷಣಕ್ಕೆ ತುರ್ತು ಸೇವೆಗೆಂದು ಆಸ್ಪತ್ರೆಗೆ ಕರೆದೊಯ್ಯಲು ಅಣಿಯಾದರು. ಅವರಿಗೆ ಕೃತಕ ಉಸಿರಾಟದ ವ್ಯವಸ್ಥೆ ಮಾಡಲಾಯಿತು. ಯಾವ ಆಸ್ಪತ್ರೆಗೆ ಒಯ್ಯುತ್ತಿದ್ದಾರೆಂಬುದೂ ಗೊತ್ತಿರಲಿಲ್ಲ. ಸೆಕ್ಯುರಿಟಿಯವನಿಗೆ ಫೋನ್ ಮಾಡಿ ತಿಳಿಸುವುದಾಗಿ ವೈದ್ಯರು ಹೇಳಿದರು. ಕೆಲವೇ ಸಮಯದಲ್ಲಿ ನನಗೆ ಗೊತ್ತಾದದ್ದೇನೆಂದರೆ, ಅವರನ್ನು ಬ್ರಾವುಜೆಜ್ ಆಸ್ಪತ್ರೆಗೆ ಸೇರಿಸಲಾಗಿತ್ತು. ನಾವೆಲ್ಲ ಟ್ಯಾಕ್ಸಿ ಮಾಡಿಕೊಂಡು ಅಲ್ಲಿಗೆ ಹೊರಟೆವು. ಜೊತೆಗೆ ಪಾವುಲಿನ್‌ಳನ್ನು ಕರೆದುಕೊಂಡು ಹೊರಟೆ. ಸಾರ್ತ್ರ್‌ಯನ್ನು ತೀವ್ರ ನಿಗಾ ಘಟಕದಲ್ಲಿಟ್ಟಿದ್ದರು. ನಾನು ಹತ್ತಿರ ಹೋದೆ. ತನಗೀಗ ಯಾವ ತೊಂದರೆಯೂ ಇಲ್ಲವೆಂದರು. ಆದರೆ, ಅವರು ಉಸಿರಾಟದ ತೊಂದರೆ ಅನುಭವಿಸುತ್ತಿದ್ದರು.

ಮರುದಿನ ವೈದ್ಯರು ಸಾರ್ತ್ರ್ ಶ್ವಾಸಕೋಶದ ಸೋಂಕಿಗೆ ಒಳಗಾಗಿರುವುದನ್ನು ತಿಳಿಸಿದರು. ಹೀಗಾಗಿ ತೀವ್ರವಾದ ಜ್ವರದ ಏರಿಳಿತವಿತ್ತು. ಆಸ್ಪತ್ರೆಯ ಕೋಣೆ ಸಾಕಷ್ಟು ದೊಡ್ಡದಾಗಿತ್ತು. ಅವರು ಯಾವುದೋ ಬೇರೆ ಪ್ರದೇಶಕ್ಕೆ ಬಂದಂತೆ ಭಾವಿಸಿದ್ದರು. ಜ್ವರದಿಂದಾಗಿ ಕೊಂಚ ಉನ್ಮತ್ತರಾಗಿದ್ದರು.